ದಿನಾಂಕ:**12.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಜಿ.ಪಿ.ಎಸ್. ವಕೀಲರಿಂದ:-

ದಾವಾ ಅನುಸೂಚಿ ಸ್ವತ್ತುಗಳು ನನ್ನ ತಾತನಿಂದ ಬಂದಿರುತ್ತದೆ. ಅದಕ್ಕೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅವುಗಳೆಂದರೆ ಇ-ಸ್ವತ್ತು, ವಂಶವೃಕ್ಷ ಆಗಿರುತ್ತವೆ. ದಾವಾ ಅನುಸೂಚಿ ಸ್ವತ್ತುಗಳು ಮೂಲತಃ ನಾಗಬೋವಿ ಅವರ ಹೆಂಡತಿ ಶೆಟ್ಟಮ್ಮ ಅವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಶೆಟ್ಟಮ್ಮ ರವರು ಸಾಕಷ್ಟು ಹಣ ಖರ್ಚು ಮಾಡಿ ಮಂಗಳೂರು ಹಂಚಿನ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿ:03.04.2009 ರಂದು ಶೆಟ್ಟಮ್ಮ ಅವರಿಂದ ಪ್ರತಿವಾದಿಯು ಎಸ್.ಆರ್.ನಂ.37/2009-10 ರಂತೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಖರೀದಿಸಿದ ದಿನದಿಂದ ಇವತ್ತಿನ ವರೆಗೂ ಅವರೇ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಅವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಅಸೆಸ್ಮೆಂಟ್ ನಂ.3218/3124 ರಂತೆ 19X40 ಅಡಿ ಜಾಗದಲ್ಲಿ ಪ್ರತಿವಾದಿಯರೇ ಸ್ವಾದೀನದಲ್ಲಿದ್ದಾರೆ ಎಂದರೆ ಅವರ ಜಾಗಕ್ಕೆ ನಾವು ತೊಂದರೆ ಕೊಟ್ಟಿಲ್ಲ, ನಮ್ಮ ಗೋಡೆಯಿಂದ ನಾವು ಸ್ವಾದೀನ ಕೇಳುತ್ತಿದ್ದೇವೆ. ಶೆಟ್ಟಮ್ಮ ರವರು ನಿರ್ಮಿಸಿದ ಹಂಚಿನ ಮನೆಯ ಗೋಡೆಯ ಉತ್ತರಕ್ಕೆ ಪಾರ್ವತಮ್ಮ, ದಕ್ಷಿಣ ದಿಕ್ಕಿಗೆ ಬೀಮಾ ಬೋವಿ ಅವರು ಮನೆ ನಿರ್ಮಾಣ ಮಾಡಿದ್ದಾರೆ, ಪ್ರತಿವಾದಿಯ ಗೋಡೆಯಿಂದ ನಮಗೆ ಯಾವುದೇ ರೀತಿಯ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ ಅನುಸೂಚಿ ಸ್ವತ್ತಿನ ಗೋಡೆಗೆ ಪ್ರತಿವಾದಿಯೇ ಮಾಲೀಕರು, ನಮಗೂ ಮತ್ತು ಸದರಿ ಗೋಡೆಗೂ ಯಾವುದೇ ಸಂಬಂದ/ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಗೋಡೆಯು ಸುಮಾರು 70-80 ವರ್ಷ ಹಳೆಯ ಮಣ್ಣಿನ ಗೋಡೆ ಎಂದರೆ ಸರಿ. ಸದರಿ ಗೋಡೆ ಬಿದ್ದುಹೋಗುವ ಸ್ಥಿತಿಯಲ್ಲಿದೆ ಎಂದರೆ ಗೋಡೆ ಮೇಲೆ ಟಾರಪಲ್ ಹಾಕಿರುತ್ತಾರೆ. ಸದರಿ ಗೋಡೆಯು ಶಿಥಿಲಾವಸ್ಥೆಯಲ್ಲಿ ಇರುವ ಕಾರಣ ಸದರಿ ಗೋಡೆಯನ್ನು ಹೊಡೆಯಲು ಅನುಮತಿ ನೀಡಿ ಎಂದು ಪ್ರತಿವಾದಿ ದಿ:22.09.2020 ರಂದು

ಪುರಸಭೆಯವರಿಗೆ ಅರ್ಜಿ ನೀಡಿರುತ್ತಾರೆ ಎಂದರೆ ನಾನೂ ಸಹ ಗೋಡೆ ಹೊಡೆಯಬಾರದು ಎಂದು ಅರ್ಜಿ ನೀಡಿರುತ್ತೇನೆ. ಸದರಿ ಅರ್ಜಿಯಂತೆ ಪುರಸಭೆಯವರು ಸ್ಥಳಕ್ಕೆ ಬಂದು ತನಿಖೆ ಮಾಡಿ ಅಕ್ಕಪಕ್ಕದವರಿಗೆ ನೋಟೀಸು ನೀಡಿ ಸದರಿ ಗೋಡೆ ಇರುವ ಜಾಗ ಪ್ರತಿವಾದಿಗೆ ಸೇರಿದ್ದು ಎಂದು ಮೌಖಿಕವಾಗಿ ಹೇಳಿ ಹೋಗಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಪತ್ರದಂತೆ ದಿಃ15.10.2020 ರಂದು ಪುರಸಭೆಯವರು ಗೋಡೆ ಕೆಡವಲು ಅನುಮತಿಯನ್ನು ಪ್ರತಿವಾದಿಗಳಿಗೆ ನೀಡಿದ್ದು ನಾನು ಅದಕ್ಕೆ ತಕರಾರು ಹಾಕಿ ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗೋಡೆ ಕೆಡವಲು ಅಡ್ಡಿಪಡಿಸಿರುತ್ತೇನೆ ಎಂದು ಪ್ರತಿವಾದಿ ಬೀರೂರು ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಬೀರೂರು ಪೋಲೀಸರು ನನ್ನನ್ನು ಠಾಣೆಗೆ ಕರೆಸಿ ಮೌಖಿಕವಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಪ್ರತಿವಾದಿಗಳ ಸ್ವತ್ತಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಸ್ವತ್ತಿನ ಸುತ್ತಮುತ್ತ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.